ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯಕೇಂದ್ರಕಾರ್ಯಾಲಯ, #39, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು – 560 001
ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047
ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.in

ಸಂಖ್ಯೆ:ಎಸ್‌ಹೆಚ್‌ಕ್ಯೂ/1423 /2026-27 ದಿನಾಂಕ:03.11.2026

ಎಲ್ಲಾ ಜಿಲ್ಲಾ ಕಾರ್ಯದರ್ಶಿಗಳು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ,
ಕರ್ನಾಟಕ

ಮಾನ್ಯರೆ,

ವಿಷಯ:– ಸಂಸ್ಥಾಪನಾ ದಿನಾಚರಣೆ ಹಾಗೂ ಧ್ವಜ ಚೀಟಿ ಬಿಡುಗಡೆ ಮಾಡುವುದು ಮತ್ತು ಇದರ ಅಂಗವಾಗಿ "ಸ್ಕೌಟ್–ಗೈಡ್ ಸಪ್ತಾಹ" ಆಚರಣೆಯ ಚಟುವಟಿಕೆಗಳನ್ನು ನಿರ್ವಹಿಸುವ ಬಗ್ಗೆ.
ಉಲ್ಲೇಖ:– ರಾಷ್ಟ್ರೀಯ ಸಂಸ್ಥೆಯ ಸುತ್ತೋಲೆ ಸಂಖ್ಯೆ294/2026 ದಿನಾಂಕ:22.10.2026

****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ನವೆಂಬರ್7, 1950 ರಂದು ರಾಷ್ಟ್ರದ ಎಲ್ಲಾ ಸ್ಕೌಟ್ ಸಂಸ್ಥೆಗಳು ವಿಲೀನವಾಗಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯಾಗಿರುವುದು ಸರಿಯಷ್ಟೆ. ಈ ಮಹತ್ವದ ದಿನ ನವೆಂಬರ್ 7 ಸಂಸ್ಥಾಪನಾ ದಿನಾಚರಣೆಯಂದು ಭಾರತಾದ್ಯಂತ ದಳಗಳ ಮಟ್ಟದಿಂದ, ಸ್ಥಳೀಯ ಸಂಸ್ಥೆ, ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಸ್ಕೌಟ್–ಗೈಡ್‌ನವರು, ಹಿತೈಶಿಗಳು ಮತ್ತು ಬೆಂಬಲಿಗರು ಉತ್ಸಾಹದಿಂದ ಆಚರಿಸುವುದಾಗಿದೆ.

ಪ್ರತಿವರ್ಷದಂತೆ ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯು ದಿನಾಂಕ:07.11.2026 ರಂದು ಈ ಸಂಸ್ಥಾಪನಾ ದಿನಾಚರಣೆ ಮತ್ತು ಧ್ವಜ ದಿನಾಚರಣೆಯನ್ನು ಯಶಸ್ವಿಯಾಗಿ ಆಚರಿಸಬೇಕಾಗಿರುವುದು.

ಜೊತೆಗೆ ಸ್ಕೌಟಿಂಗ್ & ಗೈಡಿಂಗ್‌ನ ಮೌಲ್ಯಗಳು ಮತ್ತು ಅದರಿಂದ ಸಮಾಜದ ಮೇಲೆ ಆಗುವ ಉತ್ತಮ ಪ್ರಭಾವವನ್ನು ಪ್ರದರ್ಶಿಸಲು ಹಾಗೂ ದೇಶಾದ್ಯಂತ ಈ ಚಳುವಳಿಯನ್ನು ಉತ್ತೇಜಿಸಲು ಈ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ದಿನಾಂಕ:12.11.2026 ರಿಂದ 18.11.2026 ರವರೆಗೆ "ಸ್ಕೌಟ್–ಗೈಡ್ ಸಪ್ತಾಹ ಆಚರಣೆಯ ಚಟುವಟಿಕೆಗಳ ಪ್ಯಾಕ್" ಅನ್ನು ಉಲ್ಲೇಖ 1ರನ್ವಯ ರಾಷ್ಟ್ರೀಯ ಸಂಸ್ಥೆಯ ಸುತ್ತೋಲೆಯಲ್ಲಿ ನೀಡಿದ್ದು, ಅವುಗಳನ್ನು ನಿರ್ವಹಿಸುವುದು ಅತ್ಯಗತ್ಯವಾಗಿರುವುದು.

ಅದರಂತೆ, ಈ ಕೆಳಗಿನಂತೆ, ಮುಖ್ಯ ಕಾರ್ಯಚಟುವಟಿಕೆಗಳನ್ನು ತಪ್ಪದೇ ನಿರ್ವಹಿಸಲು ತಿಳಿಸಿದೆ.

1. ದಿನಾಂಕ:07.11.2026 ರಂದು ಭಾರತ್ ಸ್ಕೌಟ್ಸ್ & ಗೈಡ್ಸ್ ಧ್ವಜಾರೋಹಣ ನೆರವೇರಿಸುವುದು.
2. ದಿನಾಂಕ:07.11.2026 ರಂದು ಧ್ವಜಾ ಚೀಟಿಗಳನ್ನು ಶಾಲಾ/ಕಾಲೇಜು ಹಂತದಲ್ಲಿ ಬಿಡುಗಡೆಗೊಳಿಸಿ ಹಣ ಸಂಗ್ರಹಿಸುವುದು ಮತ್ತು ತಮ್ಮ ತಮ್ಮ ವ್ಯಾಪ್ತಿಯಲ್ಲಿಯ ಮಾನ್ಯ ಸಚಿವರುಗಳು, ಮಾನ್ಯ ಶಾಸಕರುಗಳು, ವಿವಿಧ ಇಲಾಖೆಗಳ ಅಧಿಕಾರಿಗಳು, ದಾನಿಗಳು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಅಭಿಮಾನಿಗಳು, ಶಾಲಾ/ಕಾಲೇಜು ಮುಖ್ಯಸ್ಥರುಗಳು ಮತ್ತು ಸಾರ್ವಜನಿಕರಿಂದ ಸದರಿ ಧ್ವಜಾ ಚೀಟಿಗಳನ್ನು ಬಿಡುಗಡೆಗೊಳಿಸಿ ಅವರಿಗೆ ನೀಡಿ ಹಣ ಸಂಗ್ರಹಿಸುವುದು ಮತ್ತು ಸದರಿ ದಿನದ ಮಹತ್ವದ ಬಗ್ಗೆ ಮಾಹಿತಿ ನೀಡುವುದು.

ಜೊತೆಗೆ ದಿನಾಂಕ:12.11.2026 ರಿಂದ 18.11.2026 ರವರೆಗೆ "ಸ್ಕೌಟ್ಸ್–ಗೈಡ್ಸ್ ಸಪ್ತಾಹ" ಕಾರ್ಯಕ್ರಮದಡಿಯಲ್ಲಿ ನಿರ್ವಹಿಸಬೇಕಾದ ಪ್ರತಿ ದಿನವಾರು ಕಾರ್ಯಚಟುವಟಿಕೆಗಳ ಮುಖ್ಯಾಂಶಗಳು ಕೆಳಗಿನಂತಿವೆ.

ದಿನಾಂಕ	ಮುಖ್ಯಾಂಶ	ವಿಷಯ
ದಿನ 1 :– 12.11.2026	ಪರಿಸರ ಮತ್ತು ಸುಸ್ಥಿರತೆ ದಿನ (Environment and Sustainability Day)	ನಮ್ಮ ಭೂಮಿಯನ್ನು ರಕ್ಷಿಸಿ, ನಮ್ಮ ಭವಿಷ್ಯವನ್ನು ಸುರಕ್ಷಿತಗೊಳಿಸಿ.
ದಿನ 2 :– 13.11.2026	ಸದಸ್ಯತ್ವ ಅಭಿಯಾನ ದಿನ (Membership Drive Day)	ಪ್ರತಿಯೊಬ್ಬ ಸ್ಕೌಟ್/ಗೈಡ್ ಒಬ್ಬ ಸ್ನೇಹಿತನನ್ನು ಸ್ಕೌಟ್–ಗೈಡ್‌ಗೆ ಸೇರಿಸುವುದು
ದಿನ 3 :– 14.11.2026	ಸೇವಾ ಸಂಕಲ್ಪ ಅಭಿಯಾನ (Seva Sankalp Abhiyan)	ಯುವ ಮನಸ್ಸುಗಳು, ನವೀನ ಪರಿಹಾರಗಳು.
ದಿನ 4 :– 15.11.2026	ನಿಧಿ ಸಂಗ್ರಹಣಾ ದಿನ (Fundraising Day)	ಪ್ರತಿಯೊಂದು ಕೊಡುಗೆಯೂ ನಮ್ಮ ಆಂದೋಲನವನ್ನು ಬಲಪಡಿಸುತ್ತದೆ.
ದಿನ 5 :– 16.11.2026	ನಮ್ಮ ಪರಂಪರೆಯ ಸಂಭ್ರಮ ಮತ್ತು ಭವಿಷ್ಯಕ್ಕೆ ಸ್ಫೂರ್ತಿ (Celebrating Our Legacy)	ನಮ್ಮ ಪರಂಪರೆಯನ್ನು ಸಂಭ್ರಮಿಸೋಣ, ನಮ್ಮ ಭವಿಷ್ಯಕ್ಕೆ ಸ್ಫೂರ್ತಿ ನೀಡೋಣ.
ದಿನ 6 :– 17.11.2026	ಸಣ್ಣ ಸೇವೆಗಳು, ಶಾಶ್ವತ ಪರಿಣಾಮಗಳು (Small Acts, Lasting Impact)	ಸಣ್ಣ ಕಾರ್ಯಗಳು, ದೀರ್ಘಕಾಲದ ಪರಿಣಾಮಗಳು.
ದಿನ 7 :– 18.11.2026	ಜೀವನ ಕೌಶಲ್ಯಗಳು ಮತ್ತು ನಾವೀನ್ಯತೆಗಳ ಪ್ರದರ್ಶನ (Skills for Life and Innovation Showcase)	ವಿಷಯ: ಇಂದು ಕಲಿಯಿರಿ, ನಾಳೆ ಮುನ್ನಡೆಸಿರಿ.

ಈ ಬಗ್ಗೆಯ ಪ್ರತಿಯೊಂದು ಈ ಸ್ಕೌಟ್–ಗೈಡ್ ಸಪ್ತಾಹ ಆಚರಣೆಯ ದಿನಗಳಂದು ನಿರ್ವಹಿಸಬೇಕಾದ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಸದರಿ ಕಾರ್ಯಚಟುವಟಿಕೆಗಳು ಆಯಾಯ ದಿವಸಗಳಂದು ನಿರ್ವಹಿಸಿದ ಬಗ್ಗೆ ನಮ್ಮ ಕಛೇರಿಗೆ ತನ್ಮೂಲಕ ನಾವು ರಾಷ್ಟ್ರ ಕಛೇರಿಗೆ ವರದಿ ಮಾಡುವಲ್ಲಿ ಗಮನಹರಿಸಿ ನೀಡಬೇಕಾದ ಮುಖ್ಯಾಂಶಗಳನ್ನು ಈ ಪತ್ರದೊಂದಿಗಿನ ರಾಷ್ಟ್ರ ಸಂಸ್ಥೆಯು ಕಳುಹಿಸಿರುವ ಚಟುವಟಿಕೆಗಳ ಪ್ಯಾಕ್ (Activity Pack of Scout-Guide Week) ದಿನಾಂಕ:22.10.2026ರ ಕನ್ನಡ ಅನುವಾದದ ಸುತ್ತೋಲೆಯಲ್ಲಿ ತಿಳಿಸಲಾಗಿರುವುದು.

ಸದರಿ ಸ್ಕೌಟ್–ಗೈಡ್ ಸಪ್ತಾಹದ 2ನೇ ದಿನದಲ್ಲಿ ಕೈಗೊಳ್ಳಬೇಕಾದ ಸದಸ್ಯತ್ವ ಅಭಿಯಾನದ ವಿವಿಧ ಕಾರ್ಯಚಟುವಟಿಕೆಗಳ ಜೊತೆಗೆ ಈ ಸಪ್ತಾಹದ ದಿನಗಳಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಸದಸ್ಯತ್ವ ಹೆಚ್ಚಿಸುವಲ್ಲಿ ಈ ಕೆಳಕಂಡ ಕಾರ್ಯಚಟುವಟಿಕೆಗಳ ನಿರ್ವಹಣೆಗೆ ಆದ್ಯ ಗಮನಹರಿಸಲು ಕೋರಿದೆ.

1. ಶಾಲಾ/ಕಾಲೇಜುಗಳಿಗೆ ಹೆಚ್ಚು ಭೇಟಿ ನೀಡಿ ತರಬೇತಿ ಹೊಂದಿದವರು ಘಟಕಗಳನ್ನು ಪ್ರಾರಂಭಿಸಲು ಹಾಗೂ ಗಣತಿ ಶುಲ್ಕ ನೀಡಿಲ್ಲದವರಿಂದ ತಪ್ಪದೇ ಗಣತಿ ಹಣ ಸಂಗ್ರಹಿಸಲು ಕ್ರಮವಹಿಸುವುದು ಮತ್ತು ಘಟಕಗಳನ್ನು ಹೊಂದಿಲ್ಲದವರು ತರಬೇತಿ ಹೊಂದುವಲ್ಲಿ ಅವಶ್ಯಕ ದಳನಾಯಕರನ್ನು ತರಬೇತಿಗೆ ನಿಯೋಜಿಸಲು ಕ್ರಮವಹಿಸುವುದು.

2. ತಮ್ಮ ತಮ್ಮ ವ್ಯಾಪ್ತಿಯಲ್ಲಿಯ ಶಾಲಾ/ಕಾಲೇಜುಗಳ ಮುಖ್ಯಸ್ಥರು/ ಕ್ಷೇತ್ರ ಶಿಕ್ಷಣಾಧಿಕಾರಿಗಳು ಒಳಗೊಂಡಂತೆ ಅವರ ವ್ಯಾಪ್ತಿಯಲ್ಲಿಯ ಎಲ್ಲಾ ಅಧಿಕಾರಿಗಳು ಮುಂತಾದವರುಗಳಿಗೆ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮಹತ್ವದ ಬಗ್ಗೆ ಮಾಹಿತಿ ಶಿಬಿರವನ್ನು ಏರ್ಪಡಿಸುವುದು.

ಮೇಲ್ಕಂಡಂತೆ ತಮ್ಮ ವ್ಯಾಪ್ತಿಯಲ್ಲಿ ದಿನಾಂಕ:07.11.2026 ರಂದು ಏರ್ಪಡಿಸಿದ ಸಂಸ್ಥಾಪನ ದಿನಾಚರಣೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ದಿನಾಂಕ:12.11.2026 ರಿಂದ 18.11.2026 ರವರೆಗೆ ನಿರ್ವಹಿಸಿದ ಸ್ಕೌಟ್–ಗೈಡ್ ಸಪ್ತಾಹ ಕಾರ್ಯಚಟುವಟಿಕೆಗಳ ದೈನಂದಿನ ನಿರ್ವಹಣೆ ಬಗ್ಗೆ ಮೇಲ್ಕಂಡ ರಾಷ್ಟ್ರೀಯ ಸಂಸ್ಥೆಯ ಸುತ್ತೋಲೆಯಲ್ಲಿ ತಿಳಿಸಿರುವ, ಮುಖ್ಯಾಂಶಗಳಂತೆ ವರದಿಯನ್ನು ಹೊಂದಿ ಆ 7 ದಿನಗಳ ಮತ್ತು ದಿನಾಂಕ:07.11.2026ರ ಎಲ್ಲಾ ಚಟುವಟಿಕೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಅವುಗಳ ವರದಿಗಳನ್ನು ರಾಜ್ಯ ಸಂಸ್ಥೆಯ info@bsgkarnataka.org ಇಮೇಲ್‌ಗೆ ಕಳುಹಿಸಲು ತಿಳಿಸಿದೆ.

ದಿನಾಂಕ:07.11.2026ರ ಸಂಸ್ಥಾಪನ ದಿನಾಚರಣೆ ಕಾರ್ಯಕ್ರಮದ ವರದಿಯ ಹೊರತಾಗಿ ಉಳಿದ ಸ್ಕೌಟ್–ಗೈಡ್ ಸಪ್ತಾಹದ ಚಟುವಟಿಕೆಗಳ ವರದಿಗಳನ್ನು ರಾಷ್ಟ್ರೀಯ ಸಂಸ್ಥೆಯ ಉಲ್ಲೇಖದ ಆದೇಶದಂತೆ sdgs.scout.org ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದ ನಂತರ, ಭಾಗವಹಿಸಿದವರು scoutguideweek.bsgindia.org ವೆಬ್‌ಸೈಟ್‌ನಲ್ಲಿ ತಮ್ಮ ವಿವರಗಳನ್ನು ನಮೂದಿಸುವುದು.

ಹೀಗೆ ವರದಿಗಳನ್ನು ಅಪ್‌ಲೋಡ್ ಮಾಡಿದ ನಂತರ ರಾಷ್ಟ್ರೀಯ ಸಂಸ್ಥೆಯವರು ಸದರಿ ಸ್ಕೌಟ್ ಮತ್ತು ಗೈಡ್ ಸಪ್ತಾಹದ ಕಾರ್ಯಚಟುವಟಿಕೆಗಳ ಕೊಡುಗೆಗಳ ವರದಿಗಳನ್ನು ಗುರುತಿಸಿ ಡಿಜಿಟಲ್ ಪ್ರಮಾಣಪತ್ರಗಳನ್ನು (Digital Certificates) ನೀಡುವರು ಎಂಬುದನ್ನು ಈ ಮೂಲಕ ತಿಳಿಸಬಯಸುತ್ತೇನೆ. ಹೆಚ್ಚು ಹೆಚ್ಚು ಕಬ್, ಬುಲ್‌ಬುಲ್, ಸ್ಕೌಟ್, ಗೈಡ್, ರೋವರ್, ರೇಂಜರ್ & ದಳನಶಯಕರುಗಳು ಈ ಚಟುವಟಿಕೆಗಳಲ್ಲಿ ಭಾಗವಹಿಸಿ ಪ್ರಮಾಣಪತ್ರಗಳನ್ನು ಪಡೆಯುವಲ್ಲಿ ಪ್ರೋತ್ಸಾಹಿಸುವುದು.

ಮೇಲ್ಕಂಡಂತೆ ದಿನಾಂಕ:07.11.2026ರ ಸಂಸ್ಥಾಪನ ದಿನಾಚರಣೆ ಮತ್ತು ದಿನಾಂಕ:12.11.2026 ರಿಂದ 18.11.2026 ರವರೆಗೆ ನಿರ್ವಹಿಸಿದ ಸ್ಕೌಟ್–ಗೈಡ್ ಸಪ್ತಾಹ ಕಾರ್ಯಚಟುವಟಿಕೆಗಳ ಬಗ್ಗೆ ತಮ್ಮ ತಮ್ಮ ವ್ಯಾಪ್ತಿಯಲ್ಲಿ ಕೈಗೊಂಡ ಎಲ್ಲಾ ಅನುಷ್ಠಾನಗಳ ಬಗ್ಗೆ ವರದಿ ಮಾಡಲು ಸದರಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಕೋರಿದೆ.

ಸ್ಕೌಟ್ಸ್–ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಕೆ. ಗಂಗಪ್ಪ ಗೌಡ)
ರಾಜ್ಯ ಕಾರ್ಯದರ್ಶಿ

ರಾಜ್ಯ ಮುಖ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ

ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ:

1. ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ.ಗೈ, ಕರ್ನಾಟಕ
2. ಜಿಲ್ಲಾ ಆಯುಕ್ತರು(ಸ್ಕೌ/ಗೈ), ಭಾ.ಸ್ಕೌ.ಗೈ, ಕರ್ನಾಟಕ
3. ಎ.ಎಸ್.ಓ.ಸಿ/ಡಿಒಸಿ/ಡಿಒ/ಎಸ್‌ಜಿವಿ, ಭಾ.ಸ್ಕೌ.ಗೈ
4. ಕಛೇರಿ ಪ್ರತಿ

ದಿನಾಂಕ:12.11.2026 ರಿಂದ 18.11.2026 ರವರೆಗಿನ ಸ್ಕೌಟ್–ಗೈಡ್ ಸಪ್ತಾಹದ ಚಟುವಟಿಕೆಗಳ ಪ್ಯಾಕ್‌ನ ವಿವರಗಳು

ದಿನ 1 :– 12.11.2026

ಪರಿಸರ ಮತ್ತು ಸುಸ್ಥಿರತೆ ದಿನ (**Environment and Sustainability Day**)
ವಿಷಯ: ನಮ್ಮ ಭೂಮಿಯನ್ನು ರಕ್ಷಿಸಿ, ನಮ್ಮ ಭವಿಷ್ಯವನ್ನು ಸುರಕ್ಷಿತಗೊಳಿಸಿ.

- ಶಾಲಾ ಆವರಣಗಳು, ಉದ್ಯಾನವನಗಳು, ಸಾರ್ವಜನಿಕ ಸ್ಥಳಗಳು ಅಥವಾ ಅನುಮೋದಿತ ಸಮುದಾಯ ಪ್ರದೇಶಗಳಲ್ಲಿ ಸ್ವಚ್ಛತಾ ಅಭಿಯಾನವನ್ನು ಹಮ್ಮಿಕೊಳ್ಳುವುದು.

– ತ್ಯಾಜ್ಯ ವಿಂಗಡಣೆ, ಮರುಬಳಕೆ, ಪ್ಲಾಸ್ಟಿಕ್ ಬಳಕೆಯ ಕಡಿತ ಮತ್ತು ಜಲ ಸಂರಕ್ಷಣೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಆಯೋಜಿಸುವುದು.

– ಸೂಕ್ತ ಸ್ಥಳಗಳಲ್ಲಿ ಸ್ಥಳೀಯ ಜಾತಿಯ ಸಸಿಗಳನ್ನು ನೆಡುವುದು, ನೆಟ್ಟ ಸಸಿಗಳ ಪಾಲನೆ, ಪೋಷಣೆ ಮತ್ತು ಬೆಳವಣಿಗೆಯನ್ನು ಖಚಿತಪಡಿಸಿಕೊಳ್ಳಲು ನೀರುಣಿಸುವ ಹಾಗೂ ನಿರ್ವಹಿಸುವ ಯೋಜನೆಯನ್ನು ರೂಪಿಸುವುದು, ಸಸಿಗಳನ್ನು ನೆಡಲು ಸಾಧ್ಯವಾಗದ ಸ್ಥಳಗಳಲ್ಲಿ ಈಗಾಗಲೇ ಇರುವ ಮರಗಳು ಅಥವಾ ಹಸಿರು ಪ್ರದೇಶಗಳನ್ನು ದತ್ತು ಪಡೆದು ಸಂರಕ್ಷಿಸುವುದು.

– ಪ್ರಕೃತಿ ನಡಿಗೆ, ಜೀವವೈವಿಧ್ಯ ವೀಕ್ಷಣೆ ಅಥವಾ ಪರಿಸರ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿ, ನಿರ್ವಹಿಸುವುದು.

– ಭಾಗವಹಿಸುವ ಆಸಕ್ತಿ ಹೊಂದಿರುವವರಿಗೆ ಆ ಬಗ್ಗೆ ಹೆಚ್ಚು Earth Tribe, YLACC, CLAP ಮತ್ತು Green Skills ಚಟುವಟಿಕೆಗಳ ಬಗ್ಗೆ ತಿಳಿದುಕೊಳ್ಳಲು ಹಾಗೂ ಅವುಗಳ ಫಲಿತಾಂಶಗಳನ್ನು ಹಂಚಿಕೊಳ್ಳಲು ಪ್ರೋತ್ಸಾಹಿಸುವುದು.

ಈ ಬಗ್ಗೆಯ ವರದಿ ಸಲ್ಲಿಸುವಲ್ಲಿ ಸೂಚಿಸಲಾದ ಅಂಶಗಳು:
– ಭಾಗವಹಿಸಿದವರ ಸಂಖ್ಯೆ.
– ಸ್ವಚ್ಛಗೊಳಿಸಿದ ಅಥವಾ ದತ್ತು ಪಡೆದ ಸ್ಥಳಗಳ ಸಂಖ್ಯೆ.
– ನೆಟ್ಟ ಸಸಿಗಳ ಸಂಖ್ಯೆ ಮತ್ತು ಅವುಗಳ ನಿರ್ವಹಣಾ ಯೋಜನೆ.
– ಸಂಗ್ರಹಿಸಿದ ಅಥವಾ ವಿಂಗಡಿಸಿದ ತ್ಯಾಜ್ಯದ ವಿವರ.
– GPS ಛಾಯಾಚಿತ್ರಗಳು ಮತ್ತು ಸಂಕ್ಷಿಪ್ತ ಚಟುವಟಿಕೆ ವರದಿ.

ದಿನ 2 :– 13.11.2026

ಸದಸ್ಯತ್ವ ಅಭಿಯಾನ ದಿನ (**Membership Drive Day**)
ವಿಷಯ: ಪ್ರತಿಯೊಬ್ಬ ಸ್ಕೌಟ್/ಗೈಡ್ ಒಬ್ಬ ಸ್ನೇಹಿತನನ್ನು ಸ್ಕೌಟ್–ಗೈಡ್‌ಗೆ ಸೇರಿಸುವುದು

1. OYMS ನಿರ್ವಹಣಾ ದಾಖಲೆಗಳನ್ನು ಪರಿಶೀಲಿಸಿ ನವೀಕರಿಸುವುದು:

ಆನ್‌ಲೈನ್ ಯೂತ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (OYMS) ನಲ್ಲಿರುವ ಪ್ರಸ್ತುತ ಸದಸ್ಯರ ವಿವರಗಳನ್ನು ಪರಿಶೀಲಿಸಿ, ಹೆಸರು, ಜನ್ಮ ದಿನಾಂಕ, ಸಂಪರ್ಕ ಮಾಹಿತಿ, ಸದಸ್ಯತ್ವದ ವರ್ಗ ಮತ್ತು ಘಟಕದ ವಿವರಗಳು ಸೇರಿದಂತೆ ಎಲ್ಲಾ ಮಾಹಿತಿಗಳ ನಿಖರತೆ ಹಾಗೂ ಸಂಪೂರ್ಣತೆಯನ್ನು ಖಚಿತಪಡಿಸಿಕೊಳ್ಳುವುದು.

2. ನಕಲಿ ಸದಸ್ಯತ್ವ ದಾಖಲೆಗಳನ್ನು ಗುರುತಿಸಿ ತೆಗೆದುಹಾಕುವುದು:

ಲಭ್ಯವಿರುವ ಸದಸ್ಯರ ವಿವರಗಳು ಮತ್ತು ವಿಶಿಷ್ಟ ಗುರುತಿನ ಸಂಖ್ಯೆಗಳನ್ನು ಪರಿಶೀಲಿಸುವ ಮೂಲಕ ನಕಲಿ ಸದಸ್ಯತ್ವ ದಾಖಲೆಗಳನ್ನು ಗುರುತಿಸುವುದು. ಅಧಿಕೃತ ಪ್ರಕ್ರಿಯೆಯ ಮೂಲಕ ದಾಖಲೆಗಳನ್ನು ತಿದ್ದುಪಡಿ ಮಾಡುವುದು, ವಿಲೀನಗೊಳಿಸುವುದು ಅಥವಾ ತೆಗೆದುಹಾಕುವ ಕ್ರಮ ಕೈಗೊಳ್ಳುವುದು.

3. OYMS ನಲ್ಲಿ ಸದಸ್ಯರ ವರ್ಗಾವಣೆ ಪ್ರಕ್ರಿಯೆ:

ಮುಂದಿನ ಸೂಕ್ತ ವಿಭಾಗ ಅಥವಾ ಸದಸ್ಯತ್ವ ವರ್ಗಕ್ಕೆ ವರ್ಗಾವಣೆಯಾಗಬೇಕಾದ ಸದಸ್ಯರನ್ನು ಗುರುತಿಸುವುದು. ಅವರ ಅರ್ಹತೆ ಮತ್ತು ಅಗತ್ಯ ದಾಖಲೆಗಳನ್ನು ಪರಿಶೀಲಿಸಿ, ಅಧಿಕೃತ OYMS ಪ್ರಕ್ರಿಯೆಯ ಮೂಲಕ ವರ್ಗಾವಣೆಯನ್ನು ಪೂರ್ಣಗೊಳಿಸುವುದು.

4. ಘಟಕ ಮತ್ತು ಸದಸ್ಯತ್ವದ ವಿವರಗಳನ್ನು ಪರಿಶೀಲಿಸುವುದು:

ಘಟಕದ ಸಂಬಂಧಿತ ವಿವರಗಳು, ವಿಭಾಗಗಳು ಮತ್ತು ಸದಸ್ಯತ್ವದ ಸ್ಥಿತಿಯನ್ನು ಪರಿಶೀಲಿಸಿ, ಅಪೂರ್ಣ, ಹಳೆಯ ಅಥವಾ ತಪ್ಪಾಗಿ ನಮೂದಿಸಲಾದ ದಾಖಲೆಗಳನ್ನು ಗುರುತಿಸಿ, ಸಂಬಂಧಪಟ್ಟ ಘಟಕ ನಾಯಕರು ಮತ್ತು ಅಧಿಕೃತ ಅಧಿಕಾರಿಗಳ ಸಹಕಾರದೊಂದಿಗೆ ಅಗತ್ಯ ತಿದ್ದುಪಡಿಗಳನ್ನು ಮಾಡುವುದು.

5. ಸದಸ್ಯತ್ವ ಜಾಗೃತಿ ಮತ್ತು ಹೊಸ ಸದಸ್ಯರ ನೋಂದಣಿ ಕಾರ್ಯ ನಿರ್ವಹಿಸುವುದು:

ಶಾಲೆಗಳು, ಕಾಲೇಜುಗಳು, ಸಮುದಾಯಗಳು ಮತ್ತು ಯುವಜನ ಸಂಸ್ಥೆಗಳಲ್ಲಿ ಸ್ಕೌಟಿಂಗ್ ಮತ್ತು ಗೈಡಿಂಗ್ ಕುರಿತು ಪರಿಚಯಾತ್ಮಕ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು. ಹೊಸ ಸದಸ್ಯರನ್ನು ಪರಿಚಯಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವುದು. ಘಟಕ ನಾಯಕರಾಗಿ ಕಾರ್ಯನಿರ್ವಹಿಸಲು ಆಸಕ್ತಿ ಹೊಂದಿರುವ ವಯಸ್ಕರನ್ನು ಗುರುತಿಸಿ, ಅವರಿಗೆ ತರಬೇತಿ ಮತ್ತು ಮಾರ್ಗದರ್ಶನ ನೀಡುವುದು.

6. ಹೊಸ ಘಟಕಗಳ ಸ್ಥಾಪನೆ ಮತ್ತು ನಿಷ್ಕ್ರಿಯ ಘಟಕಗಳ ಪುನರಾರಂಭ:

ಸಂಸ್ಥೆಯ ನಿಯಮಗಳು ಮತ್ತು ಅನುಮೋದನೆಗೆ ಒಳಪಟ್ಟು, ಹೊಸ ಸ್ಕೌಟ್/ಗೈಡ್ ಘಟಕಗಳನ್ನು ಪ್ರಾರಂಭಿಸಲು ಅಥವಾ ನಿಷ್ಕ್ರಿಯವಾಗಿರುವ ಘಟಕಗಳನ್ನು ಪುನರಾರಂಭಿಸಲು ಇಂತಹ ಶಿಕ್ಷಣ ಸಂಸ್ಥೆಗಳು ಮತ್ತು ಸಮುದಾಯಗಳನ್ನು ಗುರುತಿಸಿ, ಕ್ರಮವಹಿಸುವುದು.

7. ಹೊಸ ಸದಸ್ಯರ ನಿಖರ ನೋಂದಣಿ:

ಅಧಿಕೃತ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸದಸ್ಯತ್ವ ನೋಂದಣಿ ಪ್ರಕ್ರಿಯೆಯಾದ OYMS ಮೂಲಕ ಹೊಸ ಸದಸ್ಯರನ್ನು ನೋಂದಾಯಿಸುವುದು. ನೋಂದಣಿ ಪೂರ್ಣಗೊಳಿಸುವ ಮೊದಲು ಸಲ್ಲಿಸಿದ ವಿವರಗಳನ್ನು ಪರಿಶೀಲಿಸುವುದು ಮತ್ತು ನಕಲಿ ನೋಂದಣಿಗಳನ್ನು ತಪ್ಪಿಸಲು ಈಗಾಗಲೇ ಇರುವ ದಾಖಲೆಗಳನ್ನು ಪರಿಶೀಲಿಸುವುದು.

ವರದಿ ಮಾಡುವಲ್ಲಿ ಗಮನ ಹರಿಸಿ ನೀಡಬೇಕಾದ ಮುಖ್ಯಾಂಶಗಳು:
– ಪರಿಶೀಲಿಸಿದ ಹಳೆಯ ಸದಸ್ಯತ್ವ ದಾಖಲೆಗಳ ಸಂಖ್ಯೆ.
– ನವೀಕರಿಸಿದ ಅಥವಾ ತಿದ್ದುಪಡಿ ಮಾಡಿದ ದಾಖಲೆಗಳ ಸಂಖ್ಯೆ.
– ಗುರುತಿಸಿದ ಮತ್ತು ಅಧಿಕೃತ ಪ್ರಕ್ರಿಯೆಯ ಮೂಲಕ ಸರಿಪಡಿಸಿದ ನಕಲಿ ದಾಖಲೆಗಳ ಸಂಖ್ಯೆ.

– ಪೂರ್ಣಗೊಳಿಸಿದ ಸದಸ್ಯರ ವರ್ಗಾವಣೆಗಳ ಸಂಖ್ಯೆ.
– ಹೊಸ ಘಟಕಗಳ ಸ್ಥಾಪನೆ/ ರಾಷ್ಟ್ರೀಯ ಘಟಕಗಳ ಬಗ್ಗೆ ಪರಿಶೀಲಿಸಿದ ಘಟಕಗಳು ಮತ್ತು ವಿಭಾಗಗಳ ವಿವರಗಳು.
– ವಿಶಿಷ್ಟ ಗುರುತಿನ ಸಂಖ್ಯೆಯೊಂದಿಗೆ ನೋಂದಾಯಿಸಿದ ಹೊಸ ಸದಸ್ಯರ ಸಂಖ್ಯೆ.
– ಗುರುತಿಸಿದ ಸಂಭಾವ್ಯ ಘಟಕ ನಾಯಕರ ಸಂಖ್ಯೆ.
– ಪ್ರಾರಂಭಿಸಿದ ಹೊಸ ಘಟಕಗಳು ಅಥವಾ ಪುನರಾರಂಭಿಸಿದ ಘಟಕಗಳ ಸಂಖ್ಯೆ.
– OYMS ನವೀಕರಣಗಳು, ವರ್ಗಾವಣೆಗಳು ಮತ್ತು ಸದಸ್ಯತ್ವ ಚಟುವಟಿಕೆಗಳಿಗೆ ಸಂಬಂಧಿಸಿದ ಪೂರಕ ದಾಖಲೆಗಳು.

ನಿರೀಕ್ಷಿತ ಫಲಿತಾಂಶ:

OYMS ಸದಸ್ಯತ್ವದ ಮಾಹಿತಿಯಲ್ಲಿ ನಿಖರತೆ ಮತ್ತು ಸಂಪೂರ್ಣತೆಯನ್ನು ಹೆಚ್ಚಿಸುವುದು, ನಕಲಿ ದಾಖಲೆಗಳನ್ನು ಕಡಿಮೆ ಮಾಡುವುದು, ಸದಸ್ಯರ ವರ್ಗಾವಣೆಗಳನ್ನು ಸರಿಯಾಗಿ ನವೀಕರಿಸುವುದು, ಘಟಕಗಳ ಸಂಬಂಧಿತ ವಿವರಗಳನ್ನು ಪರಿಶೀಲಿಸುವುದು ಮತ್ತು ಸಂಘಟನೆಯಾದ್ಯಂತ ಸದಸ್ಯತ್ವದ ಬೆಳವಣಿಗೆಯನ್ನು ಬಲಪಡಿಸುವುದು.

ದಿನ 3 :– 14.11.2026

ಸೇವಾ ಸಂಕಲ್ಪ ಅಭಿಯಾನ (Seva Sankalp Abhiyan)
ವಿಷಯ: ಯುವ ಮನಸ್ಸುಗಳು, ನವೀನ ಪರಿಹಾರಗಳು.

– ಯುವಜನರ ಭಾರತ್ ಸ್ಕೌಟ್ಸ್–ಗೈಡ್ಸ್‌ನ ನೇತೃತ್ವ ವಹಿಸುವಲ್ಲಿಯ ಸಮಸ್ಯೆಗಳನ್ನು ಗುರುತಿಸುವ ಕಾರ್ಯಕ್ರಮವನ್ನು ಆಯೋಜಿಸುವುದು. ಭಾಗವಹಿಸುವವರು ತಮ್ಮ ಶಾಲೆ, ನೆರೆಹೊರೆ ಅಥವಾ ಸಮುದಾಯದಲ್ಲಿ ಎದುರಿಸಬೇಕಾದ ನೈಜ ಸಮಸ್ಯೆಗಳನ್ನು ಗುರುತಿಸುವುದು.

– ಪ್ರಾಯೋಗಿಕ, ಕಡಿಮೆ ವೆಚ್ಚದ, ಎಲ್ಲರನ್ನೂ ಒಳಗೊಂಡಿರುವ ಮತ್ತು ಪರಿಸರ ಸ್ನೇಹಿ ಪರಿಹಾರಗಳನ್ನು ಪ್ರಸ್ತಾಪಿಸಲು ತಂಡಗಳನ್ನು ಪ್ರೋತ್ಸಾಹಿಸುವುದು.

– ನವೀನ ಆಲೋಚನೆಗಳ ಪ್ರಸ್ತುತಿ, ಪೋಸ್ಟರ್ ಪ್ರದರ್ಶನ, ಸರಳ ಮಾದರಿಗಳ ನಿರ್ಮಾಣ, ವಿಜ್ಞಾನ ಪ್ರಾತ್ಯಕ್ಷಿಕೆಗಳು ಅಥವಾ ಡಿಜಿಟಲ್ ಪರಿಹಾರಗಳ ಪರಿಕಲ್ಪನೆಗಳನ್ನು ಆಯೋಜಿಸುವುದು.

– ಸವಾಲಿನ ಕ್ಷೇತ್ರಗಳಾಗಿ ಶಾಲಾ ಸುರಕ್ಷತೆ, ನೈರ್ಮಲ್ಯ, ನೀರು, ತ್ಯಾಜ್ಯ ನಿರ್ವಹಣೆ, ಅಂಗವಿಕಲರಿಗೆ ಅನುಕೂಲತೆ, ಹವಾಮಾನ ಬದಲಾವಣೆಯನ್ನು ಎದುರಿಸುವ ಸಾಮರ್ಥ್ಯ, ಕಲಿಕಾ ಸಾಧನಗಳು, ಆರೋಗ್ಯ ಜಾಗೃತಿ ಮತ್ತು ಸಮುದಾಯ ಸೇವೆ ಮುಂತಾದ ವಿಷಯಗಳನ್ನು ಆಯ್ಕೆ ಮಾಡಬಹುದು.

– ಅನ್ವಯವಾಗುವ ಸಂದರ್ಭಗಳಲ್ಲಿ, ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಅಧಿಕೃತ Innovation Challenge ಸೂಚನೆಗಳನ್ವಯ ಭಾಗವಹಿಸುವಿಕೆ, ಪ್ರಸ್ತುತಿಗಳು ಮತ್ತು ಮೌಲ್ಯಮಾಪನವನ್ನು ನಡೆಸುವುದು.

ಈ ಬಗ್ಗೆ ವರದಿ ಸಲ್ಲಿಸುವಾಗ ಪರಿಗಣಿಸಬೇಕಾದ ಮುಖ್ಯ ಅಂಶಗಳು:

– ಗುರುತಿಸಿದ ಸಮಸ್ಯೆಗಳ ಸಂಖ್ಯೆ.
– ಭಾಗವಹಿಸಿದ ತಂಡಗಳ ಸಂಖ್ಯೆ.
– ಪ್ರಸ್ತಾಪಿಸಿದ ನವೀನ ಆಲೋಚನೆಗಳು ಮತ್ತು ಪರಿಹಾರಗಳ ಸಂಖ್ಯೆ.
– ಅಭಿವೃದ್ಧಿಪಡಿಸಿದ ಮಾದರಿಗಳು, ಪ್ರಾತ್ಯಕ್ಷಿಕೆಗಳು ಮತ್ತು ಪ್ರಸ್ತುತಿಗಳ ಸಂಖ್ಯೆ.
– ಭಾಗವಹಿಸಿದವರ ಸಂಖ್ಯೆ.

– ಛಾಯಾಚಿತ್ರಗಳು ಮತ್ತು ಚಟುವಟಿಕೆಯ ಫಲಿತಾಂಶಗಳನ್ನು ವಿವರಿಸುವ ಸಂಕ್ಷಿಪ್ತ ವರದಿ.

ದಿನ 4 :– 15.11.2026

ನಿಧಿ ಸಂಗ್ರಹಣಾ ದಿನ (Fund-raising Day)

ವಿಷಯ: ಪ್ರತಿಯೊಂದು ಕೊಡುಗೆಯೂ ನಮ್ಮ ಆಂದೋಲನವನ್ನು ಬಲಪಡಿಸುತ್ತದೆ.

– ಸ್ಪಷ್ಟವಾಗಿ ಉಲ್ಲೇಖಿಸಲಾದ ಮತ್ತು ಅನುಮೋದಿತ ಸ್ಕೌಟ್/ಗೈಡ್ ಚಟುವಟಿಕೆ/ ಕಾರ್ಯಕ್ರಮಗಳ ಉದ್ದೇಶಗಳಿಗಾಗಿ ಸ್ವಯಂಪ್ರೇರಿತ ದೇಣಿಗೆ ಸಂಗ್ರಹಣಾ ಅಭಿಯಾನವನ್ನು ನಡೆಸುವುದು.

– ಸ್ಥಳೀಯ ಅನುಮತಿಗಳಿಗೆ ಒಳಪಟ್ಟು, ದತ್ತಿ ಮಳಿಗೆಗಳ ನಿರ್ವಹಣೆ, ಸಮುದಾಯ ಮೇಳಗಳು, ಕರಕುಶಲ ವಸ್ತುಗಳು ಅಥವಾ ಉತ್ಪನ್ನಗಳ ಪ್ರದರ್ಶನ, ಪ್ರಾಯೋಜಿತ ನಡಿಗೆಗಳು ಇತ್ಯಾದಿ ನಿಧಿ ಸಂಗ್ರಹಣಾ ಕಾರ್ಯಕ್ರಮಗಳನ್ನು ಆಯೋಜಿಸುವುದು.

– ಹಳೆಯ ಸ್ಕೌಟ್ಸ್ ಮತ್ತು ಗೈಡ್ಸ್ ಸದಸ್ಯರು, ಪೋಷಕರು, ಸ್ಕೌಟ್ ಮತ್ತು ಗೈಡ್ ಚಳುವಳಿಯ ಸಮುದಾಯದ ಬೆಂಬಲಿಗರು ಹಾಗೂ ಜವಾಬ್ದಾರಿಯುತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಶ್ರೇಯಸ್ಸಿನ ಸ್ಥಳೀಯ ಪಾಲುದಾರರನ್ನು ಕೊಡುಗೆ ನೀಡಲು ಆಹ್ವಾನಿಸುವುದು.

– ಅಧಿಕೃತ BSG ನ ಉತ್ಪನ್ನಗಳು ಅಥವಾ ಅನುಮೋದಿತ ನಿಧಿ ಸಂಗ್ರಹಣಾ ಉತ್ಪನ್ನಗಳನ್ನು shop.bsgindia.org ವೆಬ್‌ಸೈಟ್ ಮೂಲಕ ಪ್ರಚಾರ ಮಾಡುವುದು:

– ಅಧಿಕೃತ BSG ನ ಪಡೆದ ವಂತಿಗೆಯ ಬಗ್ಗೆ ಸೂಕ್ತ ರಸೀದಿಗಳನ್ನು, ದಾನಿಗಳ ದಾಖಲೆಗಳನ್ನು, ಸರಳ ಆದಾಯ ಮತ್ತು ವೆಚ್ಚದ ವಿವರಗಳನ್ನು ನಿರ್ವಹಿಸುವುದು ಹಾಗೂ ಸ್ವೀಕರಿಸಿದ ಹಣಕ್ಕೆ ಪಾರದರ್ಶಕವಾಗಿ ಸ್ವೀಕೃತಿ ನೀಡುವುದು.

– ಸ್ಥಳೀಯ ಅನುಮತಿಗಳು ಮತ್ತು ಹಣ ಸಂಗ್ರಹಣೆಯಲ್ಲಿ ಯ ಆರ್ಥಿಕ ನೀತಿ ನಿಯಮಗಳನ್ನು ತಪ್ಪದೇ ಪಾಲಿಸುವುದು. ಯಾವುದೇ ಮಗುವಿನ ಮೇಲೆ ಹಣ ಸಂಗ್ರಹಿಸಲು ಒತ್ತಡ ಹೇರಬಾರದು ಅಥವಾ ವೈಯಕ್ತಿಕ ಆರ್ಥಿಕ ಮಾಹಿತಿಯನ್ನು ಬಹಿರಂಗಪಡಿಸಲು ಒತ್ತಾಯಿಸಬಾರದು.

ದಿನ 5 :– 16.11.2026

ನಮ್ಮ ಪರಂಪರೆಯ ಸಂಭ್ರಮಿಸುವುದು ಮತ್ತು ಭವಿಷ್ಯಕ್ಕೆ ಸ್ಫೂರ್ತಿ (Celebrating Our Legacy) ಹೊಂದುವುದು

ವಿಷಯ: ನಮ್ಮ ಪರಂಪರೆಯನ್ನು ಸಂಭ್ರಮಿಸೋಣ, ನಮ್ಮ ಭವಿಷ್ಯಕ್ಕೆ ಸ್ಫೂರ್ತಿ ನೀಡೋಣ.

– ಧ್ವಜಾರೋಹಣ ಸಮಾರಂಭ, ಸ್ಕೌಟ್/ಗೈಡ್ ಪ್ರತಿಜ್ಞೆ ಮತ್ತು ನಿಯಮಗಳ ಕುರಿತು ಚಿಂತನ ಕಾರ್ಯಕ್ರಮ ಹಾಗೂ ಸ್ಕೌಟಿಂಗ್ ಆಂದೋಲನದ ಇತಿಹಾಸ ಮತ್ತು ಮೌಲ್ಯಗಳನ್ನು ಪರಿಚಯಿಸುವ ಸಂಕ್ಷಿಪ್ತ ಕಾರ್ಯಕ್ರಮವನ್ನು ಆಯೋಜಿಸುವುದು.

– ಸಮವಸ್ತ್ರಗಳು, ಬ್ಯಾಡ್ಜ್‌ಗಳು, ಛಾಯಾಚಿತ್ರಗಳು, ಪಯೋನಿಯರಿಂಗ್ ಚಟುವಟಿಕೆಗಳು, ಶಿಬಿರಗಳು ಮತ್ತು ಸಮುದಾಯ ಸೇವೆಯ ಸಾಧನೆಗಳ ಪ್ರದರ್ಶನವನ್ನು ಆಯೋಜಿಸುವುದು.

– ಅನುಭವಗಳನ್ನು ಹಂಚಿಕೊಳ್ಳಲು ಮಾಜಿ ಸ್ಕೌಟ್ಸ್ ಮತ್ತು ಗೈಡ್ಸ್ ಸದಸ್ಯರು, ಹಳೆಯ ಸದಸ್ಯರು, ಸಮುದಾಯದ ನಾಯಕರು ಮತ್ತು ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರನ್ನು ಆಹ್ವಾನಿಸುವುದು.

– ಅನ್ವಯವಾಗುವ ಪ್ರಶಸ್ತಿ ನಿಯಮಗಳ ಪ್ರಕಾರ ಸೇವೆ, ನಾಯಕತ್ವ, ನಾವೀನ್ಯತೆ ಮತ್ತು ನಿರಂತರ ಕೊಡುಗೆಗಳಿಗಾಗಿ ಯುವಜನರು ಹಾಗೂ ಸ್ವಯಂಸೇವಕರನ್ನು ಗುರುತಿಸಿ ಗೌರವಿಸುವುದು.

– ಸದಸ್ಯತ್ವ ಅಭಿಯಾನದ ಫಲಿತಾಂಶಗಳನ್ನು ಹಂಚಿಕೊಳ್ಳುವುದು ಮತ್ತು ಹೆಚ್ಚಿನ ಶಿಕ್ಷಣ ಸಂಸ್ಥೆಗಳು ಸ್ಕೌಟ್/ಗೈಡ್ ಘಟಕಗಳನ್ನು ಪ್ರಾರಂಭಿಸಲು ಆಹ್ವಾನಿಸುವುದು.

ದಿನ 6 :– 17.11.2026

ಸಣ್ಣ ಸೇವೆಗಳ ಮೂಲಕ ಶಾಶ್ವತ ಪರಿಣಾಮಗಳು (Small Acts, Lasting Impact)
ವಿಷಯ: ಸಣ್ಣ ಕಾರ್ಯಗಳು, ದೀರ್ಘಕಾಲದ ಪರಿಣಾಮಗಳನ್ನು ಬೀರುವುದು.

– ಆಹಾರ ಬ್ಯಾಂಕ್, ಪುಸ್ತಕ ಬ್ಯಾಂಕ್, ಬಟ್ಟೆ ಸಂಗ್ರಹ ಅಭಿಯಾನ ಅಥವಾ ಸ್ಥಳೀಯ ಸಮುದಾಯದ ಅಗತ್ಯಗಳಿಗೆ ಅನುಗುಣವಾದ ಇತರ ಸಹಾಯ ಚಟುವಟಿಕೆಗಳನ್ನು ಆಯೋಜಿಸುವುದು.

– ಪೂರ್ವಾನುಮತಿ ಮತ್ತು ಅಗತ್ಯ ಸುರಕ್ಷತಾ ವ್ಯವಸ್ಥೆಗಳೊಂದಿಗೆ ಅನುಮೋದಿತ ಆಸ್ಪತ್ರೆಗಳು, ವೃದ್ಧಾಶ್ರಮಗಳು ಅಥವಾ ಸಮುದಾಯ ಸಂಸ್ಥೆಗಳಿಗೆ ಭೇಟಿ ನೀಡುವುದು.

– ಸೂಕ್ತ ಸಂದರ್ಭಗಳಲ್ಲಿ ಅರ್ಹ ತಜ್ಞರು ಮತ್ತು ಪಾಲುದಾರರ ಸಹಯೋಗದೊಂದಿಗೆ ನೈರ್ಮಲ್ಯ, ಪೌಷ್ಟಿಕ ಆಹಾರ, ಪ್ರಥಮ ಚಿಕಿತ್ಸೆ ಜಾಗೃತಿ ಅಥವಾ ಆರೋಗ್ಯ ಶಿಕ್ಷಣ ಕಾರ್ಯಕ್ರಮಗಳನ್ನು ಆಯೋಜಿಸುವುದು.

– ದೈಹಿಕ ಚಟುವಟಿಕೆಗಳು, ತಂಡದ ಆಟಗಳು, ಭಾವನಾತ್ಮಕ ಕ್ಷೇಮ ಮತ್ತು ಪರಸ್ಪರ ಗೌರವ ಹಾಗೂ ಬೆಂಬಲದ ಮನೋಭಾವವನ್ನು ಪ್ರೋತ್ಸಾಹಿಸುವುದು.

– ಸೇವೆ ಮತ್ತು ಪರಸ್ಪರ ತಿಳುವಳಿಕೆಯ ಮೌಲ್ಯಗಳಿಂದ ಪ್ರೇರಿತವಾದ ಶಾಂತಿ ನಿರ್ಮಾಣ ಅಥವಾ ಸಮುದಾಯ ಸಂವಾದ ಕಾರ್ಯಕ್ರಮವನ್ನು ಕೈಗೊಳ್ಳುವುದು.

ದಿನ 7 :– 18.11.2026

ಜೀವನ ಕೌಶಲ್ಯಗಳು ಮತ್ತು ನಾವೀನ್ಯತೆಗಳ ಪ್ರದರ್ಶನಗಳ ನಿರ್ವಹಣೆ (Skills for Life and Innovation Showcase)
ವಿಷಯ: ಇಂದಿನ ಕಲಿಕೆ, ನಾಳೆಯ ಮುನ್ನಡೆಗೆ ಪ್ರೇರಕ

– ಪ್ರಥಮ ಚಿಕಿತ್ಸೆ, ಗಂಟುಗಳ ಅಭ್ಯಾಸ, ಪಯೋನಿಯರಿಂಗ್, ದಿಕ್ಸೂಚಿ ಮತ್ತು ನಕ್ಷೆಯ ಮೂಲಕ ದಿಕ್ಕು ಗುರುತಿಸುವಿಕೆ, ಸಂವಹನ, ತಂಡದ ಕಾರ್ಯನಿರ್ವಹಣೆ ಮತ್ತು ಹೊರಾಂಗಣ ಸುರಕ್ಷತೆ ಕುರಿತು ಪ್ರಾಯೋಗಿಕ ತರಬೇತಿ ಕೇಂದ್ರಗಳನ್ನು ಆಯೋಜಿಸುವುದು.

– ಸಂಪನ್ಮೂಲಗಳ ಲಭ್ಯತೆಗೆ ಅನುಗುಣವಾಗಿ ವಯಸ್ಸಿಗೆ ಸೂಕ್ತವಾದ ಡಿಜಿಟಲ್ ಸಾಕ್ಷರತೆ, ಸೈಬರ್ ಸುರಕ್ಷತೆ, ಕೋಡಿಂಗ್, ರೋಬೋಟಿಕ್ಸ್ ಅಥವಾ ಇತರ ತಂತ್ರಜ್ಞಾನ ಪ್ರಾತ್ಯಕ್ಷಿಕೆಗಳನ್ನು ನೀಡುವುದು.

– ನಾವೀನ್ಯತೆ ಮತ್ತು ಸಮಸ್ಯೆ ಪರಿಹಾರ ದಿನದಂದು ಅಭಿವೃದ್ಧಿಪಡಿಸಿದ ಆಲೋಚನೆಗಳು ಹಾಗೂ ಮಾದರಿಗಳ ಪ್ರದರ್ಶನವನ್ನು ಆಯೋಜಿಸುವುದು.

– ಕಲಿತ ವಿಷಯಗಳು, ಯಶಸ್ವಿಯಾಗಿ ನಡೆದ ಚಟುವಟಿಕೆಗಳು ಮತ್ತು ಸುಧಾರಿಸಬೇಕಾದ ಅಂಶಗಳ ಕುರಿತು ಯುವಜನರ ನೇತೃತ್ವದಲ್ಲಿ ಆತ್ಮಾವಲೋಕನ ಕಾರ್ಯಕ್ರಮವನ್ನು ನಡೆಸುವುದು.

ಈ ಬಗ್ಗೆ ವರದಿ ಸಲ್ಲಿಸುವಾಗ ಪರಿಗಣಿಸಬೇಕಾದ ಮುಖ್ಯ ಅಂಶಗಳು:

– ಭಾಗವಹಿಸಿದವರ ಸಂಖ್ಯೆ.
– ನಡೆಸಿದ ಪ್ರಾಯೋಗಿಕ ಕೌಶಲ್ಯ ಪ್ರದರ್ಶನಗಳ ಸಂಖ್ಯೆ.
– ಪ್ರದರ್ಶಿಸಿದ ಕೌಶಲ್ಯಗಳು ಮತ್ತು ಸಾಮರ್ಥ್ಯಗಳ ವಿವರ.
– ಪ್ರದರ್ಶಿಸಿದ ನಾವೀನ್ಯತೆಗಳು, ಆಲೋಚನೆಗಳು ಮತ್ತು ಮಾದರಿಗಳ ಸಂಖ್ಯೆ.
– ಕಲಿಕಾ ಚಟುವಟಿಕೆಗಳನ್ನು ಪೂರ್ಣಗೊಳಿಸಿದವರ ಸಂಖ್ಯೆ.
– ಕಲಿಕಾ ಫಲಿತಾಂಶಗಳನ್ನು ವಿವರಿಸುವ ಛಾಯಾಚಿತ್ರಗಳು ಮತ್ತು ಸಂಕ್ಷಿಪ್ತ ಚಟುವಟಿಕೆ ವರದಿ.

ಸ್ಕೌಟ್ ಮತ್ತು ಗೈಡ್ ಸಪ್ತಾಹದ ಸಂದರ್ಭದಲ್ಲಿ ನಡೆಸುವ ಚಟುವಟಿಕೆಗಳಿಗೆ ಸೂಕ್ತ ವರದಿ ಸಲ್ಲಿಕೆ ಮತ್ತು ಮಾನ್ಯತೆ ದೊರೆಯುವಂತೆ, ಎಲ್ಲಾ ಚಟುವಟಿಕೆಗಳನ್ನು SDG ಗಳಿಗೆ ಸಂಬಂಧಿಸಿದ ಸ್ಕೌಟಿಂಗ್ ಉಪಕ್ರಮಗಳನ್ನು ಸಂಪರ್ಕಿಸುವ ವೇದಿಕೆಯಾದ sdgs.scout.org ನಲ್ಲಿ ಅಪ್‌ಡೇಟ್ ಮಾಡಬೇಕು.

ಸ್ಕೌಟ್ ಮತ್ತು ಗೈಡ್ ಸಪ್ತಾಹದಲ್ಲಿ ಭಾಗವಹಿಸುವ ಪ್ರತಿಯೊಂದು ಗುಂಪು ಅಥವಾ ವೈಯಕ್ತಿಕ ಸದಸ್ಯರು ತಮ್ಮ ದೈನಂದಿನ ಚಟುವಟಿಕೆಗಳನ್ನು ದಾಖಲಿಸಬೇಕು. ಹಾಗೆ ದಾಖಲಿಸುವಾಗ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳುವುದು.

– ಚಟುವಟಿಕೆಗಳ ಛಾಯಾಚಿತ್ರಗಳು.
– ಚಟುವಟಿಕೆಗಳ ವರದಿಗಳು.
– ಚಟುವಟಿಕೆಗಳಿಂದ ಉಂಟಾದ ಪರಿಣಾಮಗಳ ಮೌಲ್ಯಮಾಪನ.

ಮೇಲಿನ ಎಲ್ಲಾ ಮಾಹಿತಿಗಳನ್ನು ಪ್ರತಿದಿನ sdgs.scout.org ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕು.